# ಮೌಲ್ಯಮಾಪನ

**I.** ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.

1. ಗೋಳದಲ್ಲಿ ಪೂರ್ವ ಪಶ್ಚಿಮವಾಗಿ ಹಾದು ಹೋಗುವ ಊಹಾ ರೇಖೆಯ ಹೆಸರು________.

   (ಅ) ಅಕ್ಷಾಂಶ (ಆ) ಭೂಮಿಯ ಅಕ್ಷ (ಇ) ರೇಖಾಂಶ

2. $0^{o}$ ರೇಖಾಂಶ ಎಂಬುದು _____________.

   (ಅ) ಗ್ರೀನ್ ವಿಚ್ ರೇಖೆ (ಆ) ರೇಖಾಂಶ (ಇ) ಭೂಮಿಯ ಅಕ್ಷ.

3. ದೇಶಗಳು, ಖಂಡಗಳು, ರಾಜಧಾನಿಗಳು ಮುಂತಾದವುಗಳನ್ನು ಒಳಗೊಂಡಿರುವ ಭೂಪಟವನ್ನು ____________ ಎಂದು ಕರೆಯುತ್ತಾರೆ.

   (ಅ) ಪ್ರಾಕೃತಿಕ ಭೂಪಟ

   (ಆ) ರಾಜಕೀಯ ಭೂಪಟ

   (ಇ) ಮಾಹಿತಿ ಭೂಪಟ

**II.** ಉತ್ತರಿಸಿ :

1. ಭೂಪಟ (Map) ಎಂದರೇನು ?
2. ಮಾಹಿತಿನಕ್ಷೆ ಯನ್ನು ಕುರಿತು ವಿಶ್ಲೇಷಿಸು.
3. ಭಾರತದ ಸನ್ನಿವೇಶವನ್ನು ಕುರಿತು ತಿಳಿಸಿ.
4. ಭೂಪಟಗಳ ಬಗೆಗಳಾವುವು?
5. ಭೂಪಟಗಳ ಉಪಯೋಗಗಳು ಯಾವುವು?
6. ಅಕ್ಷಾಂಶ ರೇಖೆ ಎಂದರೇನು?
7. ರೇಖಾಂಶ ರೇಖೆ ಎಂದರೇನು?

**III.** ಭೂಪಟದ ಚಟುವಟಿಕೆ :

1. ಪ್ರಾಕೃತಿಕ ಲಕ್ಷಣ, ರಾಜಕೀಯ ಮತ್ತು ಮಾಹಿತಿ ನಕ್ಷೆಗಳನ್ನು ನೋಡಿ.

(ಅ) ಅವುಗಳು ಯಾವ ಅಳತೆಯಲ್ಲಿ ಬರೆಯಲ್ಪಟ್ಟಿವೆ?

(ಆ) ಅವುಗಳಲ್ಲಿ ಯಾವ ಮಾಹಿತಿಗಳನ್ನು ಕೊಡಲಾಗಿದೆ?

(ಇ) ಕೊಟ್ಟಿರುವ ಸಂಕೇತಗಳ ವಿವರಗಳನ್ನು ಪಟ್ಟಿ ಮಾಡು.

2. ಭಾರತದ ಭೂಪಟದಲ್ಲಿ ರಾಜ್ಯಗಳು ಮತ್ತು ಅವುಗಳ ರಾಜಧಾನಿಗಳನ್ನು ಗುರುತಿಸು.

## ರಚನಾತ್ಮಕ ಮೌಲ್ಯಮಾಪನ

1. ಚಿಹ್ನೆಗಳನ್ನು ಬಳಸಿಕೊಂಡು ನಿನ್ನ ಬೀದಿಯ/ವಿಭಾಗದ ಭೂಪಟವನ್ನು ಬರೆಯಬೇಕು.

2. ಟಾಲಮಿ ಬರೆದ ಪ್ರಪಂಚದ ಭೂಪಟವನ್ನು ಗಮನವಿಟ್ಟು ನೋಡಿ ಚರ್ಚಿಸಬೇಕು.

3. ಊಹಾ ಪ್ರವಾಸ

ಭಾರತ/ಪ್ರಪಂಚದಲ್ಲಿ ನೀನು ಯಾವ ಯಾವ ಸ್ಥಳಗಳಿಗೆ ಪ್ರವಾಸ ಹೋಗಲು ಇಚ್ಛಿಸುವೇ? ಯಾವ ಸಾರಿಗೆ ಸಂಚಾರವನ್ನು ಬಳಸುವೇ?

ಶಿಕ್ಷಕರು : ನೀನು ಎಲ್ಲಿಗೆ ಹೋಗಲಿದ್ದೀಯೆ?

ವಿದ್ಯಾರ್ಥಿ/ವಿದ್ಯಾರ್ಥಿನಿ : ಅಂಟಾರ್ಟಿಕಾ


ಶಿಕ್ಷಕರು : ಯಾವ ಸಾರಿಗೆ ಸಂಚಾರವನ್ನು ಬಳಸುವೇ?


ವಿದ್ಯಾರ್ಥಿ/ವಿದ್ಯಾರ್ಥಿನಿ : ಹಡಗು

ವಿದ್ಯಾರ್ಥಿಗಳು ಹಡಗಿನಲ್ಲಿ ಪ್ರಯಾಣಿಸುವಂತೆ ನಟನೆ ಮಾಡಿಕೊಂಡೇ ಗೋಡೆಯಲ್ಲಿ ನೇತಾಡುವ ಪ್ರಪಂಚದ ಭೂಪಟದಲ್ಲಿ ಅಂಟಾರ್ಟಿಕಾವನ್ನು ತೋರಿಸಬೇಕು. ಇದೇ ರೀತಿ ಖಂಡಗಳು, ದೇಶಗಳು, ದ್ವೀಪಗಳು, ನಗರಗಳು ಮುಂತಾದವುಗಳನ್ನು ಆಟದ ವಿಧಾನದಲ್ಲಿ ತಿಳಿಯುವಂತೆ ಮಾಡುವುದು.

ಅಭ್ಯಾಸ

# ಭಾರತದ ರಾಜಕೀಯ ಭೂಪಟ



ಭಾರತದ ಭೂಪಟದಲ್ಲಿ ರಾಜ್ಯಗಳು ಮತ್ತು ಅವುಗಳ ರಾಜಧಾನಿಯನ್ನು ಗುರುತಿಸಿ.

ಇತಿಹಾಸ

# ಪಾಠ 1. ಸಾಮ್ರಾಜ್ಯಗಳ ಉದಯ

## ಮಹಾ ಜನಪದಗಳು

ವೇದಕಾಲದ ಅಂತ್ಯದಲ್ಲಿ ಹೊಸ ಫಲವತ್ತಾದ ಪ್ರದೇಶಗಳಿಗಾಗಿ ಮತ್ತು ಖನಿಜ ಸಂಪತ್ತಿಗಾಗಿ ಚಿಕ್ಕ ಚಿಕ್ಕ ಆರ್ಯ ಆಡಳಿತದ ಜನಪದಗಳು ತಮ್ಮ ತಮ್ಮಲ್ಲಿಯೇ ಕದನದಲ್ಲಿ ತೊಡಗಿದರು. ಅದೇ ಉದ್ದೇಶಕ್ಕಾಗಿ ಅವರು ಪೂರ್ವದ ಕಡೆಗೆ ಸಾಗಲು ಪ್ರಯತ್ನಿಸಿದರು. ಇದರಿಂದ ಗಂಗಾನದಿ ಬಯಲಿನ ಪೂರ್ವದಲ್ಲಿಯೂ, ದಕ್ಷಿಣದಲ್ಲಿಯೂ ಇದ್ದ ಆರ್ಯರಲ್ಲದ ಸಮುದಾಯಗಳೊಂದಿಗೆ ಕದನಗಳು ಉಂಟಾದವು. ಈ ಹೋರಾಟಗಳಿಂದ ಚಿಕ್ಕ ಜನಪದಗಳು ಯುದ್ಧಗಳಿಂದ ಸೋಲನ್ನು ಅನುಭವಿಸಿದುದರಿಂದಲೋ, ತಾವಾಗಿಯೇ ಮುಂದೆ ಬಂದಿದ್ದರಿಂದಲೋ ದೊಡ್ಡ ಜನಪದಗಳಾಗಿ ಸೇರಲ್ಪಟ್ಟವು.

ಹಲವು ಜನಪದಗಳು ಒಳಗೊಂಡ ದೊಡ್ಡ ಸಂಸ್ಥೆಗಳು ಮಹಾಜನಪದಗಳಾಗಿ ಉದಯವಾದವು. ಚಿಕ್ಕ ಚಿಕ್ಕ ಸಂಸ್ಥೆಗಳಿಗಿಂತ ವಿಶಾಲವಾದ ಕಾಲದಲ್ಲಿ ಉತ್ತರ ಭಾರತದಲ್ಲಿ ಹದಿನಾರು ಮಹಾಜನಪದಗಳು ಇದ್ದವು ಎಂಬುದಾಗಿ ತಿಳಿದು ಬರುತ್ತದೆ. ಇವುಗಳಲ್ಲಿ ಕೆಲವು ವಂಶಪಾರಂಪರ್ಯವಾಗಿ ರಾಜರುಗಳಿಂದ ಆಡಳಿತ ನಡೆಸಲ್ಪಟ್ಟವು. ಇನ್ನು ಕೆಲವು ಚುನಾಯಿಸಲ್ಪಟ್ಟ ರಾಜರುಗಳಿಂದ ಆಳಲ್ಪಟ್ಟವು. ವೈಶಾಲಿ ನಗರ ರಾಜಧಾನಿಯನ್ನಾಗಿ ಒಳಗೊಂಡ ವಜ್ಜಿ ಸಂಯುಕ್ತ ಆಡಳಿತದಲ್ಲಿ (ಸಮ್ಮಿಶ್ರ ಆಡಳಿತ) 18 ಗುಂಪುಗಳು ಒಟ್ಟುಗೂಡಿದ್ದವು.

ಕೋಶಲ, ಅವಂತಿ, ವತ್ಸ, ಮಗದ ಇನ್ನು ಮುಂತಾದವುಗಳು ಪರಂಪರೆಯಾಗಿ ರಾಜರ ಆಡಳಿತ ಮಹಾಜನಪದಗಳಲ್ಲಿ ಶಕ್ತಿಯುತವಾದವುಗಳು. ಇವು ತಮ್ಮೊಳಗೆ ಮತ್ತು ಇನ್ನಿತರ ಗಣರಾಜ್ಯಗಳೊಂದಿಗೆ ಯುದ್ಧ ನಡೆಸುತ್ತಿದ್ದವು. ಮಗಧವು ಕೆಲವು ಮಹಾಜನಪದಗಳನ್ನು ಗೆದ್ದು ಕೊನೆಯಲ್ಲಿ ಒಂದು ಸಾಮ್ರಾಜ್ಯವಾಗಿ ಬೆಳವಣಿಗೆ ಹೊಂದಿತು.

**ಮಹಾ ಜನಪದಗಳು.**

| | | |
|---|---|---|
| 1. ಅಂಗ | 7. ಗೇದಿ | 13. ಅಶ್ವಕ |
| 2. ಮಗಧ | 8. ವತ್ಸ | 14. ಅವಂತಿ. |
| 3. ಕೋಶಲ | 9. ಕುರು | 15. ಗಾಂಧಾರ. |
| 4. ಕಾಶಿ. | 10. ಪಾಂಚಾಲ | 16.ಕಾಂಬೋಜ. |
| 5. ವಜ್ಜಿ | 11. ಮತ್ಸ್ಯ | |
| 6. ಮಲ್ಲ | 12. ಸೂರಸೇನ. | |

## ಮಗಧದ ಏಳಿಗೆ

### ಬಿಂಬಿಸಾರ – ಅಜಾತ ಶತ್ರು.

ಇಂದಿನ ಬಿಹಾರ ರಾಜ್ಯದ ಪಾಟ್ನವನ್ನು ಸುತ್ತುವರಿದ ಪ್ರದೇಶವು ಮಗಧ ಎಂದು ಕರೆಯಲ್ಪಟ್ಟಿತು. ಮೊದಲು ಅದರ ರಾಜಧಾನಿ 'ಸಿರಾವಸ್ತಿನಗರ'. ಅನಂತರ 'ರಾಜಗೃಹ' ಎಂಬ ನಗರವೂ, ಅಂತಿಮವಾಗಿ ' ಪಾಟಲೀಪುತ್ರ ' ಎಂಬ ನಗರವೂ ಇದ್ದವು.

ಆರ್ಯಂಕ ವಂಶಕ್ಕೆ ಸೇರಿದ ಬಿಂಬಿಸಾರ ಅತೀ ಚಿಕ್ಕ ಸಾಮ್ರಾಜ್ಯವಾಗಿದ್ದ ಮಗಧವನ್ನು ಯುದ್ಧದಿಂದ ಮತ್ತು ವೈವಾಹಿಕ ಸಂಬಂಧದ ಮೂಲಕ ಸಾಮ್ರಾಜ್ಯವನ್ನು ವಿಸ್ತರಿಸಿದನು.

ಬಿಂಬಿಸಾರನ ಮಗ ಅಜಾತ ಶತ್ರು ತನ್ನ ತಂದೆಯನ್ನು ಸೆರೆಯಲ್ಲಿಟ್ಟು ಅಧಿಕಾರ ಪಡೆದು ಕೊಂಡರು. ಇವರು ಕೋಶಲ, ಅವಂತಿ, ವೈಶಾಲಿ, ಮಹಾ ಜನಪದಗಳೊಡನೆ ಬಹಳಕಾಲ ಯುದ್ಧ ಮಾಡಿ ಜಯಿಸಿ ಮಗಧದೊಡನೆ ಈ ಪ್ರದೇಶಗಳನ್ನು ಸೇರಿಸಿ ಕೊಂಡರು ಅಜಾತ ಶತ್ರು ಪಾಟಲೀ ಪುತ್ರದಲ್ಲಿ ದೊಡ್ಡ ಕೋಟೆಯನ್ನು ನಿರ್ಮಿಸಿದರು.

### ಶಿಶುನಾಗ – ಮಹಾಪದ್ಮಾನಂದ.

ಆರ್ಯಂಕ ಸಾಮ್ರಾಜ್ಯವನ್ನು ಸೋಲಿಸಿ, ಶಿಶುನಾಗ ಅಧಿಕಾರ ಹಿಡಿದು ಕೊಂಡರು. ಶಿಶುನಾಗರ ನಂತರ ನಂದ ವಂಶಸ್ಥರು ಅಧಿಕಾರಕ್ಕೆ ಬಂದರು. ಇವರು ಮಗಧದ ಆಡಳಿತವನ್ನು ಉತ್ತರ ಭಾರತ ದಾದ್ಯಂತ ಹರಡಿದರು.

ಮಹಾಪದ್ಮಾನಂದ ಎಂಬ ಮೊದಲ ನಂದರಾಜರು ವಿಂದ್ಯಾ ಪರ್ವತವನ್ನು ದಾಟಿ ದಖ್ಖಿನ್ ಪ್ರದೇಶಗಳನ್ನು ವಶಪಡಿಸಿ ಕೊಂಡರು. ಇವರು ಸಿಂಧುನದಿಯಿಂದ ದಖ್ಖಿನ್‌ವರೆಗೆ ಸಾಮ್ರಾಜ್ಯ ವಿಸ್ತರಿಸಿದರು. ಹಾಗು ಭಾರತದ ಮೊದಲ ಸಾಮ್ರಾಜ್ಯವಾಗಿ ಮಗಧವನ್ನು ಸ್ಥಾಪಿಸಿದರು. ಸಮಾಜದ ಕಡೆಯ ವರ್ಗಕ್ಕೆ ಸೇರಿದ ಶೂದ್ರರಾದ ಶಿಶುನಾಗರು, ಮಹಾ ಪದ್ಮ ನಂದರು ರಾಜರುಗಳಾಗಿದ್ದರು. ಆ ಕಾಲದಲ್ಲಿ ಇದು ಒಂದು ಕ್ರಾಂತಿ ಎನ್ನಬಹುದು. ನಂದ ರಾಜರು ಜೈನ ಧರ್ಮಕ್ಕೆ ಹೆಚ್ಚು ಪ್ರೋತ್ಸಾಹ ನೀಡಿದರು. ಮ್ಯಾಸಿಡೋನಿಯಾದ ದೊರೆ ಅಲೆಗ್ಸಾಂಡರ್ ತನ್ನ ಸೈನ್ಯದೊಡನೆ ಭಾರತದ ಪಶ್ಚಿಮ ಮಾರ್ಗವಾಗಿ ಬಂದರು. ಬಲುದೂರದ ಪ್ರಯಾಣ ಕಾರಣದಿಂದ ಅವರ ಸೈನಿಕರು ತುಂಬಾ ಆಯಾಸವಾದದ್ದು ಹಾಗೂ ನಂದರ ಯುದ್ಧ ಕೌಶಲ್ಯವನ್ನು ತಿಳಿದು ಹಿಂದಿರುಗಿ ಹೋದರು.

## ಮೌರ್ಯ ಸಾಮ್ರಾಜ್ಯ

**ಚಂದ್ರ ಗುಪ್ತಮೌರ್ಯ**(ಕ್ರಿ. ಪೂ. 322 – 298)

ನಂದ ಅರಸನಾದ ಧನ ನಂದನಿಗೆ ವಿರುದ್ಧವಾಗಿ ದಂಗೆಯೆದ್ದು, ಯುದ್ಧದಲ್ಲಿ ಜಯಿಸಿ ಮಗಧ ಸಾಮ್ರಾಜ್ಯವನ್ನು ಮೌರ್ಯ ವಂಶಕ್ಕೆ ಸೇರಿದ ಚಂದ್ರ ಗುಪ್ತರು ವಶಪಡಿಸಿಕೊಂಡು ಆಳಿದರು.



ಮೆಗಸ್ತಾನೀಸ್



ಚಂದ್ರ ಗುಪ್ತ ಮೌರ್ಯ

ಅಲೆಗ್ಸಾಂಡರ್ ನೇತೃತ್ವದಲ್ಲಿ ಗ್ರೀಕರುಗಳಿಂದ ಮೊದಲು ವಶಪಡಿಸಿಕೊಂಡಿದ್ದ ಭಾರತದ ಪಶ್ಚಿಮ ಪ್ರದೇಶಗಳನ್ನು ಗೆದ್ದು ಮೌರ್ಯ ಸಾಮ್ರಾಜ್ಯದೊಡನೆ ಸೇರಿಸಿ ಕೊಂಡರು. ಇದನ್ನು ವಿರೋಧಿಸಿ ಸೈನ್ಯದೊಡನೆ ಆಗಮಿಸಿದ ಸೆಲ್ಯುಕಸ್ ನಿಕೇಟರ್‌ಎಂಬ ಗ್ರೀಕ್ ರಾಜನನ್ನು ಸೋಲಿಸಿ, ಅಫ್‌ಘಾನಿಸ್ತಾನ, ಕಾಂದಾಹಾರ ಮುಂತಾದ ಪ್ರದೇಶಗಳನ್ನು ತಮ್ಮ ಸಾಮ್ರಾಜ್ಯಕ್ಕೆ ಸೇರಿಸಿ ಕೊಂಡರು.

ಸೆಲ್ಯೂಕಸ್‌ನ ರಾಯಭಾರಿಯಾದ ಮೆಗಸ್ತಾನೀಸ್ ಎಂಬ ಗ್ರೀಕ್ ಮೇಧಾವಿ ಪಾಟಲೀ ಪುತ್ರದಲ್ಲಿ ಹಲವು ವರ್ಷಗಳು ಇದ್ದುಕೊಂಡು, ಭಾರತದ ಬಗ್ಗೆ ' ಇಂಡಿಕಾ ' ಎಂಬ ಗ್ರಂಥವನ್ನು ಬರೆದರು. ಚಂದ್ರಗುಪ್ತ ಮೌರ್ಯರು ಜೈನ ಧರ್ಮವನ್ನು ಸ್ವೀಕರಿಸಿ, ಸನ್ಯಾಸಿಯಾಗಿ, ಜೈನ ಮುನಿಯಾದ ಭದ್ರಬಾಹು ಎಂಬುವರೊಡನೆ ದಕ್ಷಿಣ ಭಾರತಕ್ಕೆ ಹೊರಟು ಹೋದರು ಎಂದು ಜೈನ ಧರ್ಮದ ಗ್ರಂಥಗಳು ತಿಳಿಸುತ್ತದೆ. ಅಲ್ಲಿ ಶ್ರವಣ ಬೆಳಗೊಳದಲ್ಲಿ ಜೈನ ಧರ್ಮದ ನಂಬಿಕೆಯಂತೆ ತಪಸ್ಸುಮಾಡಿ ಮರಣ ಹೊಂದಿದರು ಎಂದು ಹೇಳಲಾಗುತ್ತಿದೆ.

### ಅಶೋಕ :

ಚಂದ್ರಗುಪ್ತ ಮೌರ್ಯನ ನಂತರ, ಅವರ ಮಗ ಬಿಂದುಸಾರನು 25 ವರ್ಷಗಳು ಆಡಳಿತ ನಡೆಸಿದರು. ಅವರ ನಂತರ, ಅವರ ಮಕ್ಕಳಲ್ಲಿ ಒಬ್ಬರಾದ ಅಶೋಕ ಮೌರ್ಯ ಸಾಮ್ರಾಜ್ಯದ ಅರಸರಾದರು. (ಕ್ರಿ. ಪೂ. 273 – 236) ಪ್ರಾರಂಭದಲ್ಲಿ ನಾಲ್ಕು ವರ್ಷಗಳು ರಾಜನಾಗಲು ವಿರೋಧಿಸುತ್ತಿದ್ದ ತಮ್ಮ ಸಹೋದರರುಗಳ ದಂಗೆಯನ್ನು ಅಡಗಿಸುವ ಕಾರ್ಯದಲ್ಲಿ ತೊಡಗಿದರು. ಅನಂತರ ಎಂಟು ವರ್ಷಗಳು ಕಳೆದು ಮೌರ್ಯ ಸಾಮ್ರಾಜ್ಯದಿಂದ ಪ್ರತ್ಯೇಕವಾಗಿ ಹೋದ ಕಳಿಂಗದ ಮೇಲೆ ಯುದ್ಧ ಮಾಡಿದರು. ಘೋರ ಯುದ್ಧದ ನಂತರ ಕಳಿಂಗವನ್ನು ಮತ್ತೆ ಮೌರ್ಯ ಸಾಮ್ರಾಜ್ಯದೊಡನೆ ಸೇರಿಸಿ ಕೊಂಡರು. ಆದರೂ ಈ ಯುದ್ಧದಲ್ಲಿ ಅವರು ನೋಡಿದ ಅಪಾರ ನಾಶದ ದೃಶ್ಯಗಳು ಅವರನ್ನು ಅಪಾರ ಚಿಂತೆಗೆ ಒಳಪಡಿಸಿದವು. ಇನ್ನು ಯುದ್ಧ ಮಾಡುವುದಿಲ್ಲ ಎಂದು ಶಪಥ ಮಾಡಿದರು.

## ಅಶೋಕನ ಧರ್ಮ ವಿಜಯ

ಪ್ರಜೆಗಳಿಗೆ ಸಹಾಯ ಮಾಡುವುದು, ಅವರುಗಳನ್ನು ಪ್ರಾಮಾಣಿಕರನ್ನಾಗಿ ಮಾಡುವುದೇ ರಾಜನ ಕರ್ತವ್ಯವಾಗಿರಬೇಕೆಂದು ಅಶೋಕರು ಹೇಳಿದರು. ತಮ್ಮ ಉಳಿದ ಜೀವಿತ ಕಾಲದಲ್ಲಿ ಜನರನ್ನು ಭೇಟಿಮಾಡುವುದು, ಅವರುಗಳಿಗೆ ಸಹಾಯ ಮಾಡುವುದು, ಸಲಹೆಗಳನ್ನು ಕೊಡುವುದರಲ್ಲಿ ಕಳೆದರು. ಯುದ್ಧಮಾಡಿ ಜಯಿಸುವುದನ್ನು " ದಿಗ್ವಿಜಯ " ವನ್ನು ವಿರೋಧಿಸಿದರು. ಜನರಲ್ಲಿ ಧರ್ಮವನ್ನು ಬೆಳೆಸಲು ಇವರು ಕೈಗೊಂಡ ಅವಿರತ ಪ್ರವಾಸಗಳು " ಧರ್ಮ ವಿಜಯ" ಎಂದು ಹೇಳಲಾಗುತ್ತದೆ.

ಜಾತಿ ಮತ ಬೇಧವಿಲ್ಲದೆ ಸರ್ವರಿಗೂ ವಿಹಾರಗಳನ್ನು, ಆಸ್ಪತ್ರೆಗಳನ್ನು ಕಟ್ಟಿಸಿದರು ಜಾನುವಾರಗಳಿಗೂ ಆಸ್ಪತ್ರೆಯನ್ನು ಪ್ರಾರಂಭಿಸಿದರು. ಜೀವಬಲಿಯ ಯಾಗ ಯಜ್ಞಗಳನ್ನು ನಿಷೇಧಿಸಲಾಯಿತು. ಮಾನವೀಯತೆ ದೃಷ್ಟಿಯಿಂದ ಶಿಕ್ಷೆ ವಿಧಾನಗಳಲ್ಲಿ ಬದಲಾವಣೆಗಳನ್ನು ತರಲಾಯಿತು. ಬಲಿ ಕೊಡುವುದನ್ನು ನಿಷೇಧಿಸಲಾಯಿತು.

ಶಿಲಾ ಶಾಸನಗಳಲ್ಲಿ ಪ್ರಾದೇಶಿಕ ಭಾಷೆಯಲ್ಲಿಯೇ ಬರೆಯಿಸಿ, ಅಶೋಕರು ತಮ್ಮ ಧರ್ಮವನ್ನು ಜನರಲ್ಲಿಯೇ ಪ್ರಚಾರಗೊಳಿಸುವಂತೆ ಮಾಡಿದರು. ಜನರಿಗೆ ಸಹಾಯ ಮಾಡುವುದಕ್ಕಾಗಿಯೇ ' ಧರ್ಮ ಮಹಾಮಾತ್ರರುಗಳು' ಎಂಬ ವಿಶೇಷ ಕಾರ್ಯ ಕರ್ತರುಗಳನ್ನು ನೇಮಿಸಿದರು.

ಭಾರತದಲ್ಲಿ ಮೊದಮೊದಲು ಜನರ ಕಲ್ಯಾಣ ರಾಜ್ಯವನ್ನು ಸ್ಥಾಪಿಸಿದ ಕೀರ್ತಿಯು ಅಶೋಕರಿಗೆ ಸಲ್ಲುತ್ತದೆ.



ಅಶೋಕ



ಸಾರಾನಾಥ ಸ್ಥಂಭ

## ಅಶೋಕ ಮತ್ತು ಬೌದ್ಧ ಧರ್ಮ

ಅಶೋಕರು, ಪ್ರೀತಿ, ಶಿಸ್ತು ಮುಂತಾದ ಅಂಶಗಳನ್ನು ಒಳಗೊಂಡು ಬೌದ್ಧ ಧರ್ಮವನ್ನು ಅವಲಂಬಿಸಿದರು. ಆದರೂ ಬ್ರಾಹ್ಮಣರು, ಅಜೀವಕರು ಮುಂತಾದ ಇತರ ಧರ್ಮಕ್ಕೆ ಸೇರಿದವರೊಡನೆಯು ಕರುಣೆಯಿಂದ ನಡೆದು ಕೊಂಡರು. ಬೌದ್ಧ ಧರ್ಮವನ್ನು ಪ್ರಚಾರಗೊಳಿಸಲು ಹಲವು ಪ್ರಯತ್ನಗಳನ್ನು ಮಾಡಿದರು. ಕಪಿಲವಸ್ತು. ಸಾರನಾಥ, ಬುದ್ಧಗಯ ಮುಂತಾದ ಬೌದ್ಧ ಸ್ಮಾರಕಗಳನ್ನು ಜೀರ್ಣೋದ್ಧಾರ ಗೊಳಿಸಿದರು. ನೂರಾರು ಸ್ತೂಪಗಳನ್ನು, ಸ್ಥಂಭಗಳನ್ನು ನಿರ್ಮಿಸಿದರು. ಇವರು ಪಾಟಲೀಪುತ್ರದಲ್ಲಿ ಮೂರನೇ ಬೌದ್ಧ ಸಮ್ಮೇಳನವನ್ನು ನಡೆಸಿದರು. ಬೌದ್ಧ ಧರ್ಮವನ್ನು ಪ್ರಚಾರಗೊಳಿಸಲು ಬೌದ್ಧ ಸನ್ಯಾಸಿಗಳನ್ನು ಸಾಮ್ರಾಜ್ಯದ ಹಲವು ಪ್ರದೇಶಗಳಿಗೂ, ವಿದೇಶಗಳಿಗೂ ಕಳುಹಿಸಿದರು. ಶ್ರೀಲಂಕಾದಲ್ಲಿ ಬೌದ್ಧ ಧರ್ಮವನ್ನು ಪ್ರಚಾರ ಮಾಡಲು ತನ್ನ ಮಗನಾದ ಮಹೇಂದ್ರನನ್ನು ಕಳುಹಿಸಿದರು. ಅಶೋಕರ ಪ್ರಯತ್ನದಿಂದಾಗಿ ಬೌದ್ಧ ಧರ್ಮವು ಒಂದು ವಿಶ್ವ ಧರ್ಮ ವಾಯಿತು.

### ಅಶೋಕರ ಕಾಲದ ಕಲೆ

ಸಿಂಧೂನದಿ ಬಯಲಿನ ನಾಗರಿಕತೆಯ ನಂತರ ಭಾರತದಲ್ಲಿ ದೊರೆತ ಬಹಳ ಹಳೆಯದಾದ ಸ್ಮಾರಕಗಳೂ, ಶಿಲಾಶಾಸನಗಳೂ ಅಶೋಕರ ಕಾಲಕ್ಕೆ ಸಂಬಂಧಿಸಿವೆ. ಸ್ತೂಪಗಳು, ಶಿಲಾಸ್ಥಂಭಗಳು ದೊರೆತಿವೆ. ಸಾಂಚಿ, ಸಾರನಾಥ, ಲುಂಬಿನಿ ಮುಂತಾದ ಸ್ಥಳಗಳಲ್ಲಿರುವ ಸ್ತೂಪಗಳು ಬಹಳ ಅದ್ಭುತವಾಗಿವೆ. ಬೌದ್ಧ ಸ್ತೂಪಗಳನ್ನು ನೋಡುವವರಿಗೆ ಬಹಳ ಆಶ್ಚರ್ಯವನ್ನುಂಟು ಮಾಡುತ್ತವೆ.

ಅಶೋಕರಿಂದ ನಿರ್ಮಿಸಲ್ಪಟ್ಟ ಶಿಲಾ ಸ್ಥಂಭಗಳಿಗೆ ಮಿಗಿಲಾದವುದಳಾವುವೂ ಕಂಡು ಬರುವುದಿಲ್ಲ. ಮೂರು ಮುಖಗಳನ್ನು ಹೊಂದಿರುವ ಸಿಂಹದ ತಲೆಯು. ನಮ್ಮ ಭಾರತ ಸರ್ಕಾರದ ಲಾಂಛನ . ಅದರಲ್ಲಿ ಕಂಡು ಬರುವ ಧರ್ಮ ಚಕ್ರವು ಭಾರತದ ರಾಷ್ಟ್ರೀಯ ಧ್ವಜವಾಗಿದೆ. ಅಶೋಕ ಸ್ಥಂಬದಲ್ಲಿರುವ ಅದರ ಮುಂಭಾಗದಲ್ಲಿ ಕಾಣಬಹುದು. ತಾವರೆ ಹೂವನ್ನು ತಲೆಕೆಳಗಾಗಿ ಇಟ್ಟಿರುವ ರೀತಿಯಲ್ಲಿ ಸ್ಥಂಭವನ್ನು ಕೆತ್ತಲಾಗಿದೆ. ಪರ್ಶಿಯಾ ವಾಸ್ತುಶಿಲ್ಪದ ಮಾದರಿಯಲ್ಲಿ ರಚಿತವಾಗಿದೆ ಎಂದು ಕೆಲವರು ಅಭಿಪ್ರಾಯ ಪಡುತ್ತಾರೆ.

## ಅಶೋಕರ ಶಿಲಾ ಶಾಸನಗಳು


ಗುಹೆಗಳ ಗೋಡೆಗಳಲ್ಲಿಯೂ, ಶಿಲಾ ಸ್ಥಂಭಗಳಲ್ಲಿಯೂ, ಕಲ್ಲಿನ ಬಂಡೆಗಳ ಮೇಲೂ. ಅಶೋಕರ ಆಜ್ಞೆ ಮತ್ತು ಸಂದೇಶಗಳನ್ನು ಪ್ರಕಟಿಸಿ ಸಾಮ್ರಾಜ್ಯದ ಹಲವು ಸ್ಥಳಗಳಲ್ಲಿ ಇರಿಸಲಾಗಿತ್ತು. ಅತೀ ಹೆಚ್ಚು ಶಿಲಾ ಸ್ಥಂಭಗಳು ಪ್ರಾಕೃತ ಭಾಷೆಯಲ್ಲಿ ಬರೆಯಲ್ಪಟ್ಟಿವೆ. ವಾಯುವ್ಯ ಗಡಿ ಭಾಗಗಳಲ್ಲಿ ಕರೋಸ್ತಿ ಲಿಪಿಯಲ್ಲಿಯೂ, ಅಪಘಾನಿಸ್ತಾನದ ಭಾಗಗಳಲ್ಲಿ ಗ್ರೀಕ್ ಭಾಷೆಯಲ್ಲಿಯೂ ಬರೆಯಲ್ಪಟ್ಟಿದೆ. ಈ ಶಾಸನಗಳಲ್ಲಿ ಅಶೋಕರ ಅಹಿಂಸೆ, ಯುದ್ಧ ನಿರಾಕರಣೆ , ದಾನ, ಮಾನವೀಯ ಮೌಲ್ಯಗಳನ್ನು ವ್ಯಕ್ತಪಡಿಸುತ್ತವೆ.

### ಅಶೋಕರ ಶಿಲಾಶಾಸನ

" ಎಂಟು ವರ್ಷಗಳು ಯುದ್ಧ ಮಾಡಿ ಕಳಿಂಗವನ್ನು ಜಯಿಸಿದನು. ಅದರಲ್ಲಿ ಒಂದು ಲಕ್ಷ ಜನರು ಮರಣ ಹೊಂದಿದರು. ಒಂದೂವರೆ ಲಕ್ಷ ಜನರು ದೇಶವನ್ನು ಬಿಟ್ಟು ಹೋದರು ".

ಅದು ನನಗೆ ಅಪಾರವಾದ ದುಃಖವನ್ನು ಉಂಟುಮಾಡಿತು. ಜನಪದ ಯುದ್ಧದಲ್ಲಿ, ಲಕ್ಷ ಗಟ್ಟಲೆ ಜನರು ಕೊಲ್ಲಲ್ಪಡುವರು, ಸೆರೆವಾಸ ಅನುಭವಿಸಲ್ಪಡುವರು, ಪ್ರೀತಿಯಿಂದ ಇದ್ದವರನ್ನು ಯುದ್ಧವು ಪ್ರತ್ಯೇಕಿಸಿತು.

ಯುದ್ಧದ ನಾಶವು ಎಲ್ಲಾ ಜನರನ್ನು ತೊಂದರೆಗೆ ಒಳಪಡಿಸುತ್ತದೆ. ಇದು ನನ್ನನ್ನು ಅತೀ ದುಃಖಕ್ಕೀಡು ಮಾಡಿತು. ಆದ್ದರಿಂದ ನನಗೆ ಯುದ್ಧಕ್ಕಿಂತ ಧರ್ಮವೇ ಮೇಲೆನಿಸುತ್ತದೆ – ಅಶೋಕರು.



### ಮೌರ್ಯರ ಆಡಳಿತ ಪದ್ಧತಿ.

ಆಡಳಿತದ ಹಿತದೃಷ್ಠಿಯಿಂದ ಅಶೋಕ ಸಾಮ್ರಾಜ್ಯವು ಐದು ದೊಡ್ಡ ಭಾಗಗಳಾಗಿ ವಿಭಾಗಿಸಲ್ಪಟ್ಟಿತು.

ಉತ್ತರ ಭಾಗದಲ್ಲಿ ತಕ್ಷಶಿಲೆಯೂ, ಪಶ್ಚಿಮ ಭಾಗದಲ್ಲಿ ಉಜ್ಜೈನಿಯೂ, ದಕ್ಷಿಣ ಭಾಗದಲ್ಲಿ ಸ್ವರ್ಣಗಿರಿಯೂ, ಪೂರ್ವ ಭಾಗದಲ್ಲಿ ದೋಸಾಲಿಯೂ ರಾಜಧಾನಿಗಳಾಗಿದ್ದವು. ಸಾಮ್ರಾಜ್ಯದ ಕೇಂದ್ರವಾದ ಮಗಧವನ್ನು ರಾಜರೇ ಪಾಟಲೀಪುತ್ರದಿಂದ ಆಡಳಿತ ನಡೆಸಿದರು.

ಮಹಾರಾಜರಿಗೆ ಆಲೋಚಕರಾಗಿ ಮಂತ್ರಿಗಳೂ ಸೈನ್ಯಾಧಿಪತಿಯೂ ಇದ್ದರು. ಜಾತಿ, ಮತ ಬೇಧವಿಲ್ಲದೆ ಮಂತ್ರಿಗಳನ್ನು, ಅಧಿಕಾರಿಗಳನ್ನು ನೇಮಿಸಲ್ಪಟ್ಟರು. ಮಹಾಮಾತ್ರ ಎಂಬ ಉನ್ನತ ಅಧಿಕಾರಿಗಳು ರಾಜ್ಯಗಳ ಅಧಿಕಾರಿಗಳಾಗಿಯೂ, ರಾಜ್ಯಪಾಲರಾಗಿಯೂ ಇದ್ದರು. ರಾಜಕುಮಾರರು ಮಹಾಮಾತ್ರರುಗಳಾಗಿ ನೇಮಿಸಲ್ಪಟ್ಟರು. ಯುಕ್ತರು, ಪ್ರಾದೇಶಿಕರು, ರಾಯಭಾರಿಗಳು, ಗೂಢಾಚಾರಿ ಮುಂತಾದ ಇತರ ಅಧಿಕಾರಿಗಳು ಇದ್ದರು. ಗಡಿ ಪ್ರದೇಶದ ರಕ್ಷಣೆಯಲ್ಲಿ ತೊಡಗಿದ್ದವರನ್ನು ' ಅಂದ ಮಹಾಮಾತ್ರರು ' (ರಕ್ಷಣಾಮಹಾಮಾತ್ರರು) ಎನ್ನಲ್ಪಟ್ಟರು.

ಜನರು ನೈತಿಕ ಜೀವನ ನಡೆಸಲು ಧರ್ಮಮಹಾಮಾತ್ರರುಗಳು ಸಹಾಯ ಮಾಡುತ್ತಿದ್ದರು. ನಗರಗಳಲ್ಲಿ ಸ್ಥಳೀಯ ಆಡಳಿತಗಳು ಇದ್ದವು. ಪಾಟಲೀಪುತ್ರವನ್ನು 30 ಅಧಿಕಾರಿಗಳು ನಗರ ಆಡಳಿತ ನಿರ್ವಹಿಸುತ್ತಿದುದಾಗಿ ಮೆಗಾಸ್ತಾನೀಸ್ ಬರೆದ ಇಂಡಿಕಾ ಎಂಬ ಕೃತಿಯು ತಿಳಿಸುತ್ತದೆ. ಇವರುಗಳು 5 ಮಂದಿಯನ್ನೊಳಗೊಂಡ ಆರು ಗುಂಪುಗಳು ಇದ್ದವು. ಒಂದೊಂದು ಗುಂಪು ಒಂದು ನಿರ್ದಿಷ್ಟ ಜವಾಬ್ದಾರಿಯನ್ನು ವಹಿಸಿಕೊಂಡು ಆಡಳಿತ ನಡೆಸಿದರು.

ಮೌರ್ಯರ ಬಲಿಷ್ಟವಾದ ಭೂಸೈನ್ಯವು 30 ಸೈನಿಕರನ್ನೊಳಗೊಂಡ ಆಡಳಿತ ಗುಂಪಿನಿಂದ ಮೇಲ್ವಿಚಾರಸಲ್ಪಟ್ಟಿತು. ಪದಾತಿದಳ, ಅಶ್ವದಳ, ಗಜದಳ, ರಥ ಪಡೆ (ರಥ ದಳ), ನೌಕಾಪಡೆ ಮುಂತಾ ಈ ಐದು ವಿಭಾಗಗಳನ್ನು ಒಳಗೊಂಡು, ಗುಂಪಿನಲ್ಲಿ 5 ಉಪಗುಂಪುಗಳು ನಿರ್ವಹಣೆ ಮಾಡಿದವು. 6ನೇ ಉಪ ಗುಂಪು ಈ ದಳಗಳಿಗೆ ಸಾರಿಗೆ, ಆಹಾರ, ವೈದ್ಯಕೀಯ ಸೌಲಭ್ಯ ಹಾಗೂ ಯುದ್ಧದ ಉಪಕರಣಗಳನ್ನು ಒದಗಿಸುವ ವ್ಯವಸ್ಥೆ ಮಾಡುತ್ತಿತ್ತು.



ಅಶೋಕನ ಕಾಲದ
ಮೌರ್ಯ ಸಾಮ್ರಾಜ್ಯ
ತಕ್ಷಶಿಲ
ಸೆಲ್ಯೂಕಸ್ ನಿಕೇಟರ್‌ನಿಂದ ವಶಪಡಿಸಿಕೊಂಡ ಪ್ರದೇಶ.
ಇಂದ್ರಪ್ರಸ್ಥ
ಪಾಟಲೀಪುತ್ರ
ಸಾರನಾಥ್
ಗಯ
ಸಾಂಚಿ
ಉಜ್ಜೈನಿ
ಗಿರ್‌ನಾರ್
ತಾಮ್ರಲಿಪಿ
ದೋಸಾಲಿ
ಕಳಿಂಗ
ಸ್ವರ್ಣಗಿರಿ
ಸಿದ್ದಾಪುರ
ಸತ್ಯಪುತ್ರರು
ಕಾಂಚಿ
ಚೋಳರು
ಕೇರಳಪುತ್ರರು
ಪಾಂಡ್ಯರು
ಶ್ರೀಲಂಕ
ಅಶೋಕನ ಕಾಲದ ಮೌರ್ಯ ಸಾಮ್ರಾಜ್ಯ

ಮೌರ್ಯರ ನ್ಯಾಯಾಂಗ ವ್ಯವಸ್ಥೆಯು ಮೊದಲು ಬಹಳ ಕಠಿಣವಾಗಿತ್ತು. ಅಶೋಕರು ಮಾನವೀಯ ದೃಷ್ಟಿಯಿಂದ ಕೆಲವು ಬದಲಾವಣೆಗಳನ್ನು ತಂದರು. ಚಿತ್ರ ಹಿಂಸೆಯನ್ನು ನಿಷೇಧಿಸಲಾಯಿತು. ಮರಣ ದಂಡನೆಯ ಕೈದಿಗಳಿಗೆ ಸಮಾಧಾನವನ್ನು ತರುವ ಹೊಸ ನಿಯಮಗಳನ್ನು ಜಾರಿಗೊಳಿಸಿದರು.

ಚಿಕ್ಕ ತಪ್ಪುಗಳಿಗೆ ಶಿಕ್ಷೆಯ ಅವಧಿಯನ್ನು ಕಡಿಮೆಗೊಳಿಸಿದರು. ರಾಜರು, ಅಧಿಕಾರಿಗಳು ಎಡಬಿಡದೆ ಪ್ರವಾಸ ಮಾಡಿ ಜನರ ಸಮಸ್ಯೆಗಳನ್ನು ಹೋಗಲಾಡಿಸಲು ಹಲವು ಕ್ರಮಗಳನ್ನು ಕೈಗೊಂಡರು.

ಮೌರ್ಯ ವಂಶದ ಕೊನೆಯ ರಾಜರಾದ ಬೃಹದ್ರಥನು ತನ್ನ ಸೇನಾಧಿಪತಿಯಾದ ಪುಷ್ಯಮಿತ್ರ ಸುಂಗ ನಿಂದ ಕೊಲ್ಲಲ್ಪಟ್ಟರು. ಇದರ ನಂತರ ಹೆಚ್ಚುಕಡಿಮೆ ಐನೂರು ವರ್ಷಗಳ ಕಾಲ ಮಗಧವು ತನ್ನ ಅಧಿಕಾರವನ್ನು ಕಳೆದುಕೊಂಡಿತು.

## ಮೌಲ್ಯಮಾಪನ :

### I. ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.

1. ಪಾಟಲೀಪುತ್ರ ಕೋಟೆಯನ್ನು ನಿರ್ಮಿಸಿದವರು

   (ಅ) ಅಶೋಕರು  (ಆ) ಬಿಂಬಿಸಾರರು  (ಇ) ಅಜಾತ ಶತ್ರು.

2. ಮೆಗಾಸ್ತಾನಿಸ್‌ನ್ನು ಬರೆದ ಗ್ರಂಥ.

   (ಅ) ಅರ್ಥಶಾಸ್ತ್ರ  (ಆ) ಇಂಡಿಕಾ  (ಇ) ಮುದ್ರರಾಕ್ಷಸ.

3. ಅಶೋಕರು ಸಿಂಹಾಸವನ್ನೇರಿದ ವರ್ಷ.

   (ಅ) ಕ್ರಿ. ಪೂ. 232  (ಆ) ಕ್ರಿ. ಪೂ. 273  (ಇ) ಕ್ರಿ. ಪೂ. 255.

4. ಮೂರನೇ ಬೌದ್ಧಮಹಾ ಸಮ್ಮೇಳನ ನಡೆದ ಸ್ಥಳ.

   (ಅ) ಪಾಟಲೀಪುತ್ರ  (ಆ) ಕಾಶ್ಮೀರ  (ಇ) ಕಪಿಲವಸ್ತು.

### II. ಸರಿಯೇ / ತಪ್ಪೇ ?

1. ಸೆಲ್ಯುಕಸ್ ನಿಕೇಟರನ್ ರಾಯಭಾರಿ ಮೆಗಸ್ತಾನೀಸ್.
2. ನಂದ ವಂಶದ ಮೊದಲನೇ ರಾಜ ಮಹಾಪದ್ಮಾನಂದ.
3. ಅಶೋಕರು ಧರ್ಮ ವಿಜಯವನ್ನು ತಿರಸ್ಕರಿಸಿ ದಿಗ್ವಿಜಯ ಕೈಗೊಂಡರು.
4. ಭಾರತದಲ್ಲಿ ಮೊದಲು ಜನರ ಕಲ್ಯಾಣ ಸಾಮ್ರಾಜ್ಯವನ್ನು ಸ್ಥಾಪಿಸಿದವರು ಅಶೋಕ.
5. ಶ್ರೀಲಂಕಾದಲ್ಲಿ ಬೌದ್ಧ ಧರ್ಮವನ್ನು ಹರಡಲು ಅಶೋಕರಿಂದ ಕಳುಹಿಸಲ್ಪಟ್ಟವರು ಮಹೇಂದ್ರರು.

### III. ಉತ್ತರಿಸಿ.

1. ಮಹಾಜನಪದಗಳು ಹೇಗೆ ಉದಯವಾದವು?
2. ಭಾರತದಲ್ಲಿ ಮೊದಲು ಸಾಮ್ರಾಜ್ಯವನ್ನು ಸ್ಥಾಪಿಸಿದ ಕೀರ್ತಿ ಯಾರಿಗೆ ಸಲ್ಲುತ್ತದೆ? ವಿವರಿಸಿ.
3. ಭಾರತದಲ್ಲಿ ಜನರ ಕಲ್ಯಾಣ ಸಾಮ್ರಾಜ್ಯವನ್ನು ಮೊದಲು ಸ್ಥಾಪಿಸಲ್ಪಟ್ಟವರಾಗಿ ಅಶೋಕರು ಎಂದು ಅಭಿಪ್ರಾಯ ಪಡುವುದು ಏಕೆ?
4. ಅಶೋಕನ ಮನಪರಿವರ್ತನೆಗೆ ಕಾರಣವನ್ನು ವಿವರಿಸು.
5. ಅಶೋಕರ ಶಿಲಾ ಶಾಸನಗಳಲ್ಲಿ ಉಪಯೋಗಿಸಲಾದ ಬರವಣಿಗೆಗಳ ಬಗ್ಗೆ ವಿವರಿಸಿ.

## ರಚನಾತ್ಮಕ ಮೌಲ್ಯಮಾಪನ

1. ರಾಜರ ಕಾಲದಲ್ಲಿ ಜನರು ಯುದ್ಧದಿಂದಾಗಿ ಅತಿ ಹೆಚ್ಚು ಬಾಧಿಸಲ್ಪಟ್ಟರು. ಈಗ ಜನರು ಹೇಗೆಲ್ಲಾ ಬಾಧಿಸಲ್ಪಡುತ್ತಿರುವರು ಎಂಬುದನ್ನು ಪಟ್ಟಿ ಮಾಡಿ.
2. ಸಮೀಪದಲ್ಲಿ ಶಿಲಾಶಾಸನಗಳೇನಾದರು ಇದ್ದಲ್ಲಿ ಹೋಗಿ ನೋಡಬೇಕು. ಅಕ್ಷರಗಳನ್ನು ಓದಲು ಪ್ರಯತ್ನಿಸಿ.
3. ಸಾರನಾಥ ಸ್ತಂಭದ ಚಿತ್ರವನ್ನು ಬರೆಯಬೇಕು ಅಥವಾ ಚಿತ್ರವನ್ನು ನೋಡಿ ತಿಳಿದುಕೊಂಡ ವಿವರಗಳನ್ನು ಬರೆಯಬೇಕು.
4. ಕೊಟ್ಟಿರುವ ಭಾರತದ ಭೂಪಟದಲ್ಲಿ ಅಶೋಕರ ಕಾಲದ ಮೌರ್ಯ ಸಾಮ್ರಾಜ್ಯದ ಎಲ್ಲೆಗಳನ್ನು ಬರೆಯಬೇಕು. ಕೆಳಕಂಡ ಸ್ಥಳಗಳನ್ನು ಗುರುತಿಸುವುದು.
   - ತಕ್ಷಶಿಲ
   - ಇಂದ್ರಪ್ರಸ್ಥ
   - ಪಾಟಲಿಪುತ್ರ
   - ಸಾರನಾಥ್
   - ಗಯಾ
   - ಕಳಿಂಗ
   - ಗಿರ್‌ನಾರ್

# ಪಾಠ 2. ಕುಶಾನ ಸಾಮ್ರಾಜ್ಯ

ಮೌರ್ಯರ ಪತನದ ನಂತರ ಭಾರತದಲ್ಲಿ ಸ್ಥಾಪಿಸಿದ ಶಕ್ತಿಶಾಲಿ ಸಾಮ್ರಾಜ್ಯವೇ ಕುಶಾನ ಸಾಮ್ರಾಜ್ಯ. ಯೂಚ್ಚಿ ಪಂಗಡಕ್ಕೆ ಸೇರಿದ ಒಂದು ವರ್ಗದವರೇ ಕುಶಾನರು. ಭಾರತದ ವಾಯುವ್ಯಭಾಗದಲ್ಲಿ ಕುಶಾನ ಸಾಮ್ರಾಜ್ಯವನ್ನು ಮೊದಲನೇ ಕ್ಯಾಡ್‌ಫಿಸಸ್ ಕ್ರಿ ಶ. ಮೊದಲನೆಯ ಶತಮಾನದಲ್ಲಿ ಸ್ಥಾಪಿಸಿದನು. ಇವನ ನಂತರಬಂದ ಎರಡನೇ ಕ್ಯಾಡ್ ಫಿಸಸ್ ಕ್ರಿ. ಶ (65 – 75) ಪಂಜಾಬ್ ಮತ್ತು ಗಂಗಾ ಬಯಲು ಪ್ರದೇಶವನ್ನು ವಶಪಡಿಸಿಕೊಂಡನು.

## ಕನಿಷ್ಕ

ಎರಡನೆಯ ಕ್ಯಾಡ್‌ಫಿಸಸ್ ಮರಣದ ನಂತರ ಕನಿಷ್ಕನು (ಕ್ರಿ. ಶ. 78 – 101) ಸಿಂಹಾಸನವನ್ನು ವಶಪಡಿಸಿಕೊ ಂಡನು. ಕನಿಷ್ಕನು ಕುಷಾನವಂಶದ ಶ್ರೇಷ್ಠ ಅರಸ. ಇವರು ಪೂರ್ವದಲ್ಲಿ ಪಾಟಲಿ ಪುತ್ರದವರವಿಗೂ ದಂಡ ಯಾತ್ರೆಯನ್ನು ಕೈಗೊಂಡು ಶಕಸತ್ರಪರನ್ನು ಸೋಲಿಸಿದ. ಚೀನಾದ ಮೇಲೆ ಎರಡುಬಾರಿ ದಂಡೆಯಾತ್ರೆ ನಡೆಸಿದ ಮೊದಲನೆಯ ಯುದ್ಧದಲ್ಲಿ ಚೀನಾದ ದಳಪತಿ ಪಾಂಜೋ ಎಂಬುವವನಿಂದ ಸೋಲಿಸಲ್ಪಟ್ಟನು. ಆದರೂ ಎರಡನೆಯ ಬಾರಿ ಯುದ್ಧ ನಡೆಸಿ ಜಯುಗಳಿಸಿದನು. ಇದರಿಂದ ಕಾಶ್ಮೀರ್, ಯಾರ್ಕಂಡ್, ಕೋಟಾನ್ ಮೊದಲಾದ ಮಧ್ಯ ಏಷ್ಯಾದ ಪ್ರದೇಶಗಳನ್ನು ತನ್ನ ಸಾಮ್ರಾಜ್ಯದೊಡನೆ ಸೇರಿಸಿಕೊಂಡನು. ಪುರುಷಪುರ ಎಂಬ ಪೆಶಾವರ್ ನಗರವನ್ನು ಹೊಸರಾಜಧಾನಿಯನ್ನಾಗಿ ಮಾಡಿದನು.

ನಂತರ ಬೌದ್ಧಧರ್ಮದ ಕಡೆಗೆ ಗಮನ ಹರಿಸಿದನು. ನಾಲ್ಕನೇ ಬೌದ್ಧ ಮಹಾಸಮ್ಮೇಳನವನ್ನು ಕಾಶ್ಮೀರದಲ್ಲಿ ಸಮಾವೇಶಗೊಳಿಸಿದನು. ಇದರಲ್ಲಿ ಪ್ರಸಿದ್ಧಿಯಾದ ಬೌದ್ಧ ಪಂಡಿತರಾದ ವಸುಬಂದು, ಅಶ್ವರ ಘೋಷ, ನಾಗರ್ಜುನ ಮೊದಲಾದವರು ಭಾಗವಹಿಸಿದ್ದರು. ಈ ಸಮ್ಮೇಳನದಲ್ಲಿ ಮಹಾಯಾನ ಬೌದ್ಧ ಧರ್ಮ ಶಾಖೆ ಉದಯವಾಯಿತು. ಮಹಾಯಾನ ಬೌದ್ಧ ಧರ್ಮವನ್ನು ಪ್ರಚಾರಮಾಡಲು ಸನ್ಯಾಸಿಗಳ ಗುಂಪು ಟಿಬೆಟ್, ಚೀನಾ ಮೊದಲಾದ ದೇಶಗಳಿಗೆ ಕಳುಹಿಸಲಾಯಿತು.

ಮಹಾಯಾನ ಬೌದ್ಧ ಮೇಧಾವಿಯಾದ (ಪಂಡಿತ) ಅಶ್ವಘೋಷನು ಸಂಸ್ಕೃತ ಭಾಷೆಯಲ್ಲಿ ಬುದ್ಧಚರಿತ, ಸೂತ್ರಾಲಂಕಾರ ಮೊದಲಾದ ಗ್ರಂಥಗಳನ್ನು ರಚಿಸಿದನು. ವಸುಮಿತ್ರನು ಮಹಾವಿಬಾಸ ಎಂಬ ಜ್ಯೋತಿಷ್ಯಾಸ್ತ್ರ ಗ್ರಂಥವನ್ನು ರಚಿಸಿದನು. ನಾಗರ್ಜುನ ತತ್ವಶಾಸ್ತ್ರ ಗ್ರಂಥಗಳನ್ನು ರಚಿಸಿದನು. ವೈದ್ಯಕೀಯ ಪಂಡಿತರಾದ ಚರಕ, ಗ್ರೀಕ್ ಕಟ್ಟಡ ಕಲೆಯ ನಿಪುಣ ಎಜಲಾಷು ಕನಿಷ್ಕನ ಆಸ್ಥಾನದಲ್ಲಿದ್ದರು.

ಇಂಡೋಗ್ರೀಕ್ ಸಮ್ಮಿಶ್ರ ಕಲೆಯಾದ ಗಾಂಧಾರ ಕಲೆ ಶೈಲಿಯಲ್ಲಿ ಬುದ್ಧ ಮತ್ತು ಬೋದಿಸತ್ವರ ಹೊಸ ಬಗೆಯ ಶಿಲ್ಪಗಳನ್ನು ಕೆತ್ತಲಾಯಿತು. ಬೌದ್ಧ ಧರ್ಮದ ಮೇಲೆ ಅವರಿಗೆ ಇದ್ದ ಆಸಕ್ತಿಯಿಂದಾಗಿ ಬೌದ್ಧ ಮತ ಪ್ರಚಾರವಮಾಡಲು ಅವರು ಕೈಗೊಂಡ ಪ್ರಯತ್ನದಿಂದ ಕನಿಷ್ಕನನ್ನು ಎರಡನೆಯ ಅಶೋಕ ಎಂದು ಕರೆಯಲಾಯಿತು. ಕನಿಷ್ಕನು ಸಿಂಹಾಸನವನ್ನು ಅಲಂಕರಿಸಿದ ವರ್ಷವನ್ನು ಪರಿಗಣಿಸಿ ಹೊಸ ಶಕ ಶತಾಬ್ಧ ಎಂಬ ಹೊಸ ಕಾಲಗಣನೆಯ ಪದ್ಧತಿಯನ್ನು ಪ್ರಾರಂಭಿಸಲಾಯಿತು. ಕನಿಷ್ಕನು ಕೊನೆಯಲ್ಲಿ ಅವರ ಗುಡಾರದಲ್ಲಿಯೇ ಮೋಸಗಾರರಿಂದ ಕೊಲ್ಲಲ್ಪಟ್ಟರು. ಇವರ ನಂತರ ಕುಶಾನ ಸಾಮ್ರಾಜ್ಯವು ಅವನತಿಯಾಯಿತು.



ಕನಿಷ್ಕ

## ಗುಪ್ತ ಸಾಮ್ರಾಜ್ಯ


ಕುಶಾನ ಸಾಮ್ರಾಜ್ಯದ ಅವನ ತಿಯ ನಂತರ ಮಗದದಲ್ಲಿ ಪಾಟಲಿ ಪುತ್ರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಉದಯವಾದ ಸಾಮ್ರಾಜ್ಯವೇ ಗುಪ್ತಸಾಮ್ರಾಜ್ಯ.

ಗುಪ್ತವಂಶದ ಪ್ರಥಮ ಅರಸ ಮೊದಲನೆಯ ಚಂದ್ರಗುಪ್ತ. (ಕ್ರಿ. ಶ. 319 – 335) ಇವರ ಆಳ್ವಿಕೆಯ ಕಾಲದಲ್ಲಿ ಗುಪ್ತಯುಗವು (ಗುಪ್ತಶಕೆ) ಪ್ರಾರಂಭವಾಯಿತು.

ಇವರ ನಂತರ ಅಧಿಕಾರಕ್ಕೆಬಂದ ಸಮುದ್ರ ಗುಪ್ತನ (ಕ್ರಿ. ಶ. 335 – 375) ದಂಡೆಯಾತ್ರೆಯ ವಿಜಯಗಳನ್ನು ಅಲಹಬಾದ್ ಸ್ಥಂಭಶಾಸನದಲ್ಲಿ ವಿವರಿಸಲಾಗಿದೆ. ಬಂಗಾಳದಿಂದ ಸಿಂಧುನದಿಯುವರೆವಿಗೂ ಹಿಮಾಲಯ ಪರ್ವತದಿಂದ ವಿಂದ್ಯಾಪರ್ವತವರೆವಿಗೂ ಈ ಸಾಮ್ರಾಜ್ಯವಿಸ್ತಾರವಾಗಿದ್ದಿತು. ಒಂಭತ್ತು ಜನ ಉತ್ತರ ಭಾರತದ ಅರಸರುಗಳನ್ನು ಹನ್ನೊಂದು ಗಣರಾಜ್ಯಗಳನ್ನು, ಹನ್ನೆರಡು ದಕ್ಷಿಣಭಾರತದ ಅರಸರನ್ನು ಯುದ್ಧದಲ್ಲಿ ಜಯಿಸಿದುದಾಗಿ ಅಲಹಬಾದ್ ಶಿಲಾಶಾಸನವು ತಿಳಿಸುತ್ತದೆ. ಅಲಹಬಾದ್ ಶಿಲಾಶಿಶಾಸನವನ್ನು ನಿರ್ಮಿಸಿದವರು ಇವರ ಮಂತ್ರಿ ಅರಿಸೇನ. ಸಮುದ್ರಗುಪ್ತನ ನಂತರ ಎರಡನೇ ಚಂದ್ರಗುಪ್ತನು (ಕ್ರಿ. ಶ. 380 – 414) ಪ್ರಸಿದ್ಧಿಯಾದ ಅರಸನಾದನು. ಇವರು ವಿದೇಶಿ ದಾಳಿ ಖೋರರಾದ ಶಕರನ್ನು ಜಯಿಸಿದನು. ಉಜ್ಜೈನಿ ನಗರವನ್ನು ವಶಪಡಿಸಿಕೊಂಡನು ರಾಮಾಯಣ, ಮಹಾಭಾರತ, 18 ಪುರಾಣಗಳನ್ನು ಸಂಗ್ರಹಿಸಲಾಯಿತು, ಪಂಚತಂತ್ರ ಕಥೆಗಳನ್ನು ರಚಿಸಲಾಯಿತು.

ಸಂಸ್ಕೃತ ಭಾಷೆಯ ಪಂಡಿತರಿಗೆ ಇವರು ಆಶ್ರಯದಾತರಾಗಿದ್ದರು. ಕಾಳಿದಾಸ, ಬಾಸ, ವಿಶಾಖದತ್ತಮೊದಲಾದ ಪ್ರಸಿದ್ಧ ಸಂಸ್ಕೃತ ಪಂಡಿತರು ಇವರ ಆಶ್ರಯವನ್ನು ಪಡೆದುಕೊಂಡಿದ್ದರು. ಸಂಸ್ಕೃತ ಭಾಷೆಯು ಆಡಳಿತಭಾಷೆಯಾಗಿದ್ದಿತು. ವಿಷ್ಣು, ಶಿವ, ದುರ್ಗಿ ಮೊದಲಾದ ಹಿಂದೂ ದೇವರುಗಳಿಗೆ ಸಣ್ಣ, ಸಣ್ಣ ದೇವಾಲಯಗಳನ್ನು ಕಟ್ಟಲಾಯಿತು. ಅಜಂತಾದಲ್ಲಿರುವ ಕೆಲವು ಬೌದ್ಧ ಗುಹಾಂತರ ಶಿಲ್ಪಗಳು ಗುಪ್ತರ ಕಾಲದ ಚಿತ್ರಕಲೆ ಗೆ ಸೇರಿದವು ಗಳಾಗಿವೆ.


ಅಜಂತಾ ಚಿತ್ರಕಲೆ


ಮೆಹರೌಲಿ ಕಬ್ಬಿಣದ ಸ್ಥಂಭ

ಆರ್ಯಭಟ, ವರಹಾಮಿಹಿರ ಮೊದಲಾದ ಪ್ರಸಿದ್ಧಿಯಾದ ಗಣಿತ – ಖಗೋಳ ಶಾಸ್ತ್ರಜ್ಞರು, ಚರಕ,ಸುಶ್ರುತ, ದನ್ವಂತರಿ ಮೊದಲಾದ ವೈದ್ಯಕೀಯ ಪಂಡಿತರು ಗುಪ್ತರ ಕಾಲಕ್ಕೆ ಸೇರಿದವರು. 1500 ವರ್ಷಗಳಾದರೂ ತುಕ್ಕು ಹಿಡಿಯದೆ ಇನ್ನೂ ಹೊಳೆಯುತ್ತಿರುವ ಮೆಹರೌಲಿಯ ಕಬ್ಬಿಣದ ಸ್ಥಂಭ ಗುಪ್ತರಕಾಲಕ್ಕೆ ಸೇರಿದುದು.

ಕುಮಾರ ಗುಪ್ತನ ಕಾಲದಲ್ಲಿ ಬೌದ್ಧರ ಪ್ರಸಿದ್ಧವಾದ ನಳಂದ ವಿಶ್ವವಿದ್ಯಾನಿಲಯ ಅಸ್ತಿತ್ವಕ್ಕೆ ಬಂದಿತು. ಆದರೆ ಸಮಾಜದಲ್ಲಿ ಜಾತಿ ಪದ್ಧತಿಯು ಬಹಳ ಕಠಿಣವಾಗಿತ್ತು.

ಅಶೋಕನ ಕಾಲದಲ್ಲಿ ಬಹಿಷ್ಕರಿಸಿದ್ದ ಪ್ರಾಣಿವಧೆ, ಅಶ್ವಮೇಧಯಾಗ ಪುನಃ ಪ್ರಾರಂಭವಾದವು. ಶಿವ – ಶಕ್ತಿ – ವಿಷ್ಣು, ಮುರುಗ, ಮೊದಲಾದ ದೇವರುಗಳ ಪ್ರಾರ್ಥನೆ ಅಧಿಕವಾಯಿತು. ಹಿಂದೂ ದೇವರುಗಳಿಗೆ ದೇವಾಲಯಗಳನ್ನು ಕಟ್ಟಲಾಯಿತು. ಆದುದರಿಂದ ಗುಪ್ತರ ಕಾಲವನ್ನು “ ಸುವರ್ಣಯುಗ” ಎಂದು ಕರೆಯಲಾಯಿತು.

ಪುಷ್ಯಮಿತ್ರ ಹೂಣರು ಮೊದಲಾದವರು ಭಾರತದ ಮೇಲೆ ಧಾಳಿನಡೆಸಿದ ಪರಿಣಾಮವಾಗಿ ಭಾರತದಲ್ಲಿ ಸುವರ್ಣಯುಗ ಎಂದು ಕರೆಯಲ್ಪಟ್ಟ ಗುಪ್ತಸಾಮ್ರಾಜ್ಯ ಅವನತಿಯನ್ನು ಹೊಂದಿತು. ಹೆಸರಾಂತ ಚೀನಾದೇಶದ ಪ್ರವಾಸಿ ಫಾಹಿಯಾನ್, ಎರಡನೇ ಚಂದ್ರಗುಪ್ತರ (ವಿಕ್ರಮಾದಿತ್ಯ) ಕಾಲದಲ್ಲಿ ಭಾರತದ ಬೌದ್ಧ ಕ್ಷೇತ್ರಗಳಿಗೆ ಭೇಟಿ ನೀಡಿದನು.

### ಹರ್ಷನ ಸಾಮ್ರಾಜ್ಯ

ಗುಪ್ತರ ಪತನದ ನಂತರ ವಿದೇಶಿಯರ ಧಾಳಿಯಿಂದಾಗಿ ಅರಾಜಕತೆಯಿಂದ ಕೂಡಿದ ಉತ್ತರ ಭಾರತದಲ್ಲಿ ಮತ್ತೆ ಒಂದು ಸಾಮ್ರಾಜ್ಯವನ್ನು ನಿರ್ಮಿಸಿದವರು ಥಾನೇಶ್ವರದ ಅರಸ ಹರ್ಷವರ್ಧನ. (ಕ್ರಿ. ಶ. 606 – ಕ್ರಿ. ಶ. 647)



ಹರ್ಷ

ಹರ್ಷನು ತನ್ನ ಅಣ್ಣನನ್ನು ಕೊಲೆಗೈದ ಶಶಾಂಕನೊಡನೆ ದೀರ್ಘಕಾಲದವರೆಗೆ ಯುದ್ಧಮಾಡಿದನು. ಹರ್ಷನಿಗೆ ಕಾಮರೂಪದ (ಅಸ್ಸಾಂ) ಅರಸ ಬಾಸ್ಕರ ವರ್ಮನು ಸಹಾಯ ಮಾಡಿದನು. ಶಶಾಂಕನ ಮರಣದನಂತರ ಬಂಗಾಳದ ಬಹುಭಾಗವನ್ನು ತನ್ನ ಸಾಮ್ರಾಜ್ಯಕ್ಕೆ ಸೇರಿಸಿಕೊಂಡನು. ತನ್ನ ತಂಗಿ ರಾಜಶ್ರೀ ಬೇಡಿಕೆಯಂತೆ ಕನೂಜಿನ ಅರಸನಾದನು. ನಂತರ ಕನೂಜ್ ಹರ್ಷನ ರಾಜಧಾನಿಯಾಯಿತು. ಮಾಳವ, ಸಿಂದು, ಒರಿಸ್ಸಾ, ಭಾಗಗಳನ್ನು ಹರ್ಷನು ಜಯಿಸಿದನು. ದಕ್ಷಿಣ ಭಾರತವನ್ನು ವಶಪಡಿಸಿಕೊಳ್ಳಲು ಪ್ರಯತ್ನಿಸಿದನು. ಆದರೆ ಈ ಪ್ರಯತ್ನದಲ್ಲಿ ಜಯಸಾದಿಸಲಿಲ್ಲ. ಏಕೆಂದರೆ ಚಾಲುಕ್ಯ ಅರಸ ಎರಡನೇ ಪುಲಕೇಶಿ ಹರ್ಷನನ್ನು ಸೋಲಿಸಿದನು.

ಬೌದ್ಧ ಸನ್ಯಾಸಿನಿಯಾಗಿ ಮತಾಂತರಿಯಾಗಿದ್ದ ರಾಜಶ್ರೀ ಚೀನಾದ ಪ್ರವಾಸಿ ಹೂಯನ್ ಸಾಂಗ್ ಪ್ರಭಾವದಿಂದ ಹರ್ಷ ಬೌದ್ಧ ಮತಾವಲಂಬಿಯಾದನು. ಕನೂಜ್ ಮತ್ತು ಪ್ರಯಾಗದಲ್ಲಿ ಧಾರ್ಮಿಕ ಸಮ್ಮೇಳನವನ್ನು ನಡೆಸಿದನು. ಈ ಸಮ್ಮೇಳನಗಳಿಗೆ ಬೌದ್ಧ ಧರ್ಮ ಮತ್ತು ಇತರ ಧರ್ಮಕ್ಕೆ ಸೇರಿದ ವಿದ್ವಾಂಸರು ಅಪಾರ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಈ ಸಮ್ಮೇಳನದ ಕೊನೆಯಲ್ಲಿ ತನ್ನ ಸಂಪತ್ತೆಲ್ಲವನ್ನು ಭಿಕ್ಷುಗಳಿಗೆ, ವಿದ್ವಾಂಸರಿಗೆ ಸಾರ್ವಜನಿಕರಿಗೆ ದಾನ ಮಾಡಿದನು.




ನಳಂದ ವಿಶ್ವವಿದ್ಯಾಲಯ

ಬೌದ್ಧ ವಿಶ್ವವಿದ್ಯಾಲಯವಾದ ನಳಂದಾ ಹರ್ಷನ ಪೋಷಣೆಯಿಂದಾಗಿ ವಿಶ್ವಪ್ರಸಿದ್ಧಿಯಾದ ವಿಶ್ವವಿದ್ಯಾಲಯವಾಗಿ ಬೆಳೆಯಿತು. ಭಾರತೀಯರು ಹಾಗೂ ವಿದೇಶಿಯರು ಹೆಚ್ಚಿನ ಸಂಖ್ಯೆಯಲ್ಲಿ ನಳಂದಾ ವಿಶ್ವವಿದ್ಯಾಲಯದಲ್ಲಿ ಶಿಕ್ಷಣವನ್ನು ಪಡೆದರು.

ಹರ್ಷನು ಪ್ರಜೆಗಳನ್ನು ಭೇಟಿಮಾಡಿ ಅವರ ಕುಂದು ಕೊರತೆಗಳನ್ನು ವಿಚಾರಿಸಿ ಅವುಗಳನ್ನು ನಿವಾರಿಸುತ್ತಿದ್ದರು. ಸಾಹಿತ್ಯಕ್ಕೆ ಪ್ರೋತ್ಸಾಹ ನೀಡಿದನು. ಇವರ ಮಂತ್ರಿಯಾದ ಬಾಣ ಸಂಸ್ಕೃತಪಂಡಿತ.

ಇವರು " ಹರ್ಷಚರಿತ " ಎಂಬ ಗ್ರಂಥವನ್ನು ರಚಿಸಿದರು. ಹರ್ಷನು ಸಂಸ್ಕೃತ ಭಾಷೆಯಲ್ಲಿ ಪಾಂಡಿತ್ಯವನ್ನು ಹೊಂದಿದ್ದನು. ಇವರು 'ನಾಗಾನಂದ' ' ರತ್ನಾವಳಿ ' 'ಪ್ರಿಯದರ್ಶಿನಿ' ಎಂಬ ಗ್ರಂಥಗಳನ್ನು ರಚಿಸಿದರು.



ಚೀನಾದ ಬೌದ್ಧಸನ್ಯಾಸಿ ಹೂಯನ್ ಸಾಂಗ್ ಹರ್ಷನ ಕಾಲದಲ್ಲಿ ಭಾರತಕ್ಕೆ ಬಂದಿದ್ದನು. ಕನೋಜ್, ಪ್ರಯಾಗ, ನಳಂದಾ, ಕಾಂಚಿಪುರ ಮೊದಲಾದ ಪ್ರದೇಶಗಳಿಗೆ ಭೇಟಿ ನೀಡಿದನು. ಹರ್ಷನ ಆಸ್ಥಾನದಲ್ಲಿ ಸ್ವಲ್ಪ ಕಾಲದವರಿಗೆ ತಂಗಿದ್ದು ಅವನು ಬರೆದ 'ಸಿ – ಯು – ಕಿ' ಎಂಬ ಪ್ರವಾಸಿ ಗ್ರಂಥ ಅಂದಿನ ಭಾರತದ ಪರಿಸ್ಥಿತಿ, ಬೌದ್ಧ ಧರ್ಮದ ಹಲವು ವಿವರಗಳನ್ನು ತಿಳಿಸುತ್ತದೆ. ಇಸ್ಲಾಂ ದಂಡೆಯಾತ್ರೆಗಿಂತ ಮೊದಲು ಉತ್ತರ ಭಾರತದಲ್ಲಿದ್ದ ಕೊನೆಯ ಸಾಮ್ರಾಜ್ಯ ಹರ್ಷನ ಸಾಮ್ರಾಜ್ಯ.

## ಮೌಲ್ಯಮಾಪನ :

### I ಬಿಟ್ಟ ಸ್ಥಳಗಳನ್ನು ತುಂಬಿರಿ.

1. ಕುಷಾನ ವಂಶದ ಸ್ಥಾಪಕ ______________ .
2. ಬುದ್ಧಚರಿತೆ ಎಂಬ ಗ್ರಂಥವನ್ನು ಬರೆದವರು ______________ .
3. ಕನಿಷ್ಕನ ಕಾಲದ ವೈದ್ಯ ನಿಪುಣ ______________ .
4. ಥಾನೇಶ್ವರದ ಅರಸ ______________ .
5. ಗುಪ್ತರ ಕಾಲವನ್ನು ಭಾರತದ ______________ ಎಂದು ಕರೆಯುವರು.

### II ಸರಿಯೇ / ತಪ್ಪೇ ?

1. ಕನಿಷ್ಕನ ರಾಜಧಾನಿ ಪೆಷಾವರ್.
2. ಸಿ – ಯು – ಕಿ ಎಂಬ ಗ್ರಂಥವನ್ನು ಬರೆದವರು ಹೂಯನ್ ಸಾಂಗ್.
3. ಗ್ರೀಕ್ ಕಟ್ಟಡ ಕಲೆಯ ನಿಪುಣ ಎಜಿಲಾಷ್.
4. ಮೆಹರೌಲಿ ಕಬ್ಬಿಣದ ಸ್ಥಂಭ ಗುಪ್ತ ಯುಗಕ್ಕೆ ಸೇರಿದುದು.
5. ಸೂತ್ರಾಲಂಕಾರ ಎಂಬ ಗ್ರಂಥವನ್ನು ಬರೆದವರು ಅಶ್ವಘೋಷ.

### III ಹೊಂದಿಸಿ ಬರೆಯಿರಿ.


| | | |
|---|---|---|
| 1. ನಾಲ್ಕನೇ ಬೌದ್ಧ ಸಮ್ಮೇಳನ | – | ಯೂಚ್ಚಿ ವಂಶಕ್ಕೆ ಸೇರಿದವರು. |
| 2. ಸಮುದ್ರ ಗುಪ್ತನ ಆಳ್ವಿಕೆಯಕಾಲ | – | ಕನಿಷ್ಕ. |
| 3. ಕನಿಷ್ಕನ ಆಳ್ವಿಕೆಯ ಕಾಲ | – | ಕುಮಾರ ಗುಪ್ತ. |
| 4. ಬಾಣ | – | ಕುಶಾನವಂಶದ ಸ್ಥಾಪಕ. |
| 5. ಹರ್ಷ | – | ಕ್ರಿ. ಶ. 78 – ಕ್ರಿ. ಶ. 101. |
| 6. ಕುಷಾನರು | – | ಹರ್ಷ ಚರಿತ |
| 7. ಎರಡನೇ ಅಶೋಕ | – | ಕಾಶ್ಮೀರ. |
| 8. ನಳಂದ ವಿಶ್ವವಿದ್ಯಾಲಯ | – | ಪ್ರಿಯದರ್ಶಿಕ. |
| 9. ಒಂದನೇ ಕ್ಯಾಡ್‌ಪಿಸಸ್ | – | ಕ್ರಿ. ಶ. 335 – ಕ್ರಿ. ಶ. 375. |

### IV. ಉತ್ತರಿಸು.

1. ಗಾಂಧಾರ ಕಲೆಯ ಮೂಲವನ್ನು ಕುರಿತು ವಿವರಿಸು.
2. ಗುಪ್ತರ ಯುಗವನ್ನು " ಭಾರತದ ಸುವರ್ಣಯುಗ" ಎಂದು ಕರೆಯಲು ಕಾರಣವೇನು?
3. ಗುಪ್ತರ ಅವನತಿಗೆ ಕಾರಣವಾಗಿದ್ದ ವಿದೇಶಿಯರ ದಂಡ ಯಾತ್ರೆಯನ್ನು ಕುರಿತು ಬರೆಯಿರಿ.
4. ಶಕಾಬ್ಧ – ಗುಪ್ತಯುಗ. – ವಿವರಿಸು.
5. ಫಾಹಿಯಾನ್ – ಹೂಯನ್ ಸಾಂಗ್ ಕುರಿತು ಲಘು ಟಿಪ್ಪಣಿಯನ್ನು ಬರೆಯಿರಿ.

# ರಚನಾತ್ಮಕ ಮೌಲ್ಯಮಾಪನ

1. ಭರ್ತಿ ಮಾಡಿ.



2. ಗ್ರಂಥಾಲಯದಲ್ಲಿ ನೀನು ಓದಿದ ಪುಸ್ತಕಗಳನ್ನು ಅದರ ಲೇಖಕರನ್ನು ಬರೆಯುವುದು.

3. ಸಂಚಾರ ಸೌಕರ್ಯವಿಲ್ಲದ ಆ ಕಾಲದಲ್ಲಿ ಪಾಹಿಯಾನ್, ಹ್ಯೂಯನ್ ಸಾಂಗ್ ಮುಂತಾದವರು ಹೇಗೆ ಭಾರತಕ್ಕೆ ಆಗಮಿಸಿರಬಹುದು? ಪ್ರಯಾಣ ಅನುಭವವನ್ನು ಕೇಳಿ ತಿಳಿದುಕೋ. ಓದಿ ತಿಳಿದುಕೊ.

4. ರಾಜರುಗಳ ಗಮನ ಯಾವುದರಲ್ಲಿ ಅಧಿಕವಾಗಿತ್ತು?

   ಅ. ದಂಡಯಾತ್ರೆ

   ಆ. ಪ್ರಜೆಗಳ ಸೇವೆ – ಚರ್ಚಿಸಬೇಕು.